ಬೆಂಗಳೂರು ನಗರದಲ್ಲಿರುವ ಅನುದಾನಿತ ಪ್ರೌಢಶಾಲೆಗಳ ಬಗ್ಗೆ

1034 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಅನುದಾನಿತ ಪ್ರೌಢಶಾಲೆಗಳು ಎಷ್ಟು?*

ಆ) *ಈ ಶಾಲೆಗಳಲ್ಲಿ ಎಷ್ಟು ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ.*

ಇ) *ಈ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳೆಷ್ಟು (ಶಾಲಾವಾರು ಮಾಹಿತಿ ನೀಡುವುದು)*

ಈ) *ಈ ಖಾಲಿ ಹುದ್ದೆಗಳನ್ನು ತುಂಬದಿರಲು ಕಾರಣವೇನು?*

ಉ) *ಬೆಂಗಳೂರು ನಗರದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದೆಯೇ?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) 232

ಆ) 2602

ಇ) 314 (ಶಾಲಾವಾರು ಮಾಹಿತಿಯನ್ನು ತದ ನಂತರದಲ್ಲಿ ಒದಗಿಸಲಾಗುವುದು)

ಈ) ಖಾಸಗಿ ಶಾಲಾ ಕಾಲೇಜುಗಳಲ್ಲಿನ ಹುದ್ದೆ ತುಂಬುವುದು ಸಂಬಂಧಪಟ್ಟ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗೆ ಸಂಬಂಧಿಸಿದ ವಿಷಯವಾಗಿದೆ.

ಉ) ಅನುದಾನಿತವಾಗಿ ಮಂಜೂರಾದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಡಳಿತ ಮಂಡಳಿಯು ಪ್ರಸ್ತಾವನೆ ಸಲ್ಲಿಸಿದ್ದರೆ ನೇಮಕಾತಿ ನಿಯಮ ಮತ್ತು ಮೀಸಲಾತಿ ನಿಯಮಗಳನ್ವಯ ಅಂತಹ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರವು ಅನುಮತಿಯನ್ನು ನೀಡುತ್ತದೆ.

ಜಯನಗರದಲ್ಲಿರುವ ಬಿಇಎಸ್‌ಕಾಲೇಜಿಗೆ ಅನುದಾನ ನೀಡುವುದರ ಬಗ್ಗೆ

689 - ಶ್ರೀ ರಾಮಲಿಂಗರೆಡ್ಡಿ (ಜಯನಗರ) :ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಜಯನಗರದಲ್ಲಿರುವ ಬಿ.ಇ. ಎಸ್. ಸಂಜೆ ಕಾಲೇಜು ಯಾವಾಗ ಪ್ರಾರಂಭವಾಯಿತು?*

ಆ) *ಈ ಕಾಲೇಜನ್ನು ಪ್ರಾರಂಭಿಸಿದ ನಂತರ ಪ್ರಾರಂಭವಾದ ಹಲವಾರು ಕಾಲೇಜುಗಳಿಗೆ ಸರ್ಕಾರ ಅನುದಾನ ನೀಡುತ್ತಿರುವುದು ನಿಜವೆ?*

ಇ) *ಈ ಕಾಲೇಜಿನವರು ಅನುದಾನ ನೀಡಬೇಕೆಂಬ ಕೋರಿಕೆ ಸಲ್ಲಿಸಿದ್ದಾರೆಯೇ*

ಈ) *ಯಾವಾಗ ಕೋರಿಕೆ ಸಲ್ಲಿಸಲಾಗಿದೆ?*

ಉ) *ಈ ಕಾಲೇಜನ್ನು ಅನುದಾನ ಸಂಹಿತೆಗೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?*

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಬಿ. ಇ. ಎಸ್. ಸಂಜೆ ಕಾಲೇಜು 1971-72ರಲ್ಲಿ (ಪಿ.ಯು.ಸಿ) ಮತ್ತು 1984-85ರಲ್ಲಿ (ಬಿ.ಎ.ಮತ್ತು ಬಿ. ಎಸ್. ಸಿ. ಪದವಿ) ಪ್ರಾರಂಭವಾಯಿತು.

ಆ) 1984-85 ಅಥವಾ ಅದರಿಂದೀಚೆಗೆ ಪ್ರಾರಂಭಿಸಿದ ಯಾವುದೇ ಸಂಜೆ ಪ್ರಥಮ ದರ್ಜೆ ಕಾಲೇಜಿಗೂ ಅನುದಾನ ನೀಡಿಲ್ಲ.